**ರಮೇಶ್ ಎನ್.ಆರ್.**

ಮಾಜಿ ಅಧ್ಯಕ್ಷರು : ಬೆಂಗಳೂರು ದಕ್ಷಿಣ ಜಿಲ್ಲೆ ಬಿ.ಜೆ.ಪಿ.
ಆಡಳಿತ ಪಕ್ಷದ ಮಾಜಿ ನಾಯಕರು – ಬಿಬಿಎಂಪಿ

ಮೊ : 9880011999



ನಂ. 2910, 14ನೇ 'ಎ' ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070. | e-mail : rameshnrbbmp@gmail.com

ಉಲ್ಲೇಖ : 113/RO/2026-27 ದಿನಾಂಕ : 01/06/2026

ಇವರಿಗೆ,
**ಮಾನ್ಯ ಮುಖ್ಯಮಂತ್ರಿಗಳು,**
ಕರ್ನಾಟಕ ಸರ್ಕಾರ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

**ವಿಷಯ:– "ಬೆಂಗಳೂರು ನಗರದ ಪ್ರತಿಷ್ಠಿತ ಬೌರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದಿರುವ ನೂರಾರು ಕೋಟಿ ಅಕ್ರಮದ ಬಗ್ಗೆ ತನಿಖೆಗೆ ಆದೇಶಿಸುವಂತೆ ಮತ್ತು ಸಂಸ್ಥೆಯನ್ನು ಕೂಡಲೇ ಸೂಪರ್ ಸೀಡ್ ಮಾಡಬೇಕೆಂದು ಕೋರಿ."**

**ಕಳೆದ 13 ವರ್ಷಗಳಿಂದ ಬೌರಿಂಗ್ ಇನ್‌ಸ್ಟಿಟ್ಯೂಟ್‌ನ ಕಾರ್ಯದರ್ಶಿ ಸ್ಥಾನದಲ್ಲಿ ಕುಳಿತಿರುವ H. S. ಶ್ರೀಕಾಂತ್ ಎಂಬ ಪರಮ ಭ್ರಷ್ಟ ಮಾಡಿರುವ / ಮಾಡುತ್ತಿರುವ ಅಕ್ರಮಗಳು ಲೆಕ್ಕವೇ ಇಲ್ಲದಷ್ಟಿವೆ !!!**

**ಅವುಗಳ ಪೈಕಿ ಪ್ರಮುಖವಾದವು ಈ ಕೆಳಕಂಡಂತಿದೆ.**

- **ಕಳೆದ 10 ವರ್ಷಗಳ ಅವಧಿಯಲ್ಲಿ ಕ್ಲಬ್‌ನ ಅಭಿವೃದ್ಧಿ ಕಾರ್ಯಗಳಿಗೆ ₹. 350 ಕೋಟಿಗಳಷ್ಟು ವೆಚ್ಚ ಮಾಡಲಾಗಿದೆ ಎಂದು ಲೆಕ್ಕ ತೋರಿಸಲಾಗಿದೆ !!!**

  **ವಾಸ್ತವವಾಗಿ ಇದರ ಶೇ. 25% ರಷ್ಟು ಮೊತ್ತವನ್ನು ಖರ್ಚು ಮಾಡಿರುವ ದಾಖಲೆಗಳೂ ಸಹ ಸಿಗುವುದಿಲ್ಲ !!!**

- **2021-22 ರಿಂದ ಇದುವರೆಗೆ ಸುಮಾರು 2,000 ಜನರಿಂದ ತಲಾ ₹. 20,00,000/- (ಇಪ್ಪತ್ತು ಲಕ್ಷ) ಗಳಂತೆ ಸದಸ್ಯತ್ವ ಶುಲ್ಕ ಪಡೆದು ಹೊಸ ಸದಸ್ಯರನ್ನಾಗಿ ಮಾಡಿಕೊಳ್ಳಲಾಗಿದೆ. ಇದರ ಜೊತೆ ಶೇ. 18% ರಂತೆ ಅವರಿಂದ ₹. 54 ಕೋಟಿ ರೂಪಾಯಿಗಳನ್ನು GST ರೂಪದಲ್ಲಿ ಸಂಗ್ರಹಿಸಲಾಗಿದೆ.**

  **ಆದರೆ, ಈ ರೀತಿ ಸಂಗ್ರಹಿಸಿರುವ ₹. 54 ಕೋಟಿ GST ಮೊತ್ತವನ್ನು ಕೇಂದ್ರದ ಹಣಕಾಸು ಸಚಿವಾಲಯದ ಕಂದಾಯ ಇಲಾಖೆಗೆ ಇದುವರೆಗೂ ಜಮೆ ಮಾಡದೆ ಬೃಹತ್ ಮೊತ್ತದ "ಆರ್ಥಿಕ ಅಪರಾಧ"ವನ್ನು ಮಾಡಿದ್ದಾರೆ !!!**

- **ಈ ರೀತಿ 2,000 ಜನರು ಸದರಿ Bowring Institute ನ ಸದಸ್ಯತ್ವ ಪಡೆಯಲು ಸದಸ್ಯತ್ವ ಶುಲ್ಕದೊಂದಿಗೆ ತಲಾ ₹. 3,60,000/- ಗಳಷ್ಟು ಮೊತ್ತದ GST ಶುಲ್ಕವನ್ನು ಪಾವತಿಸಿದ್ದರೂ ಸಹ, ಅವರಿಗೆ ಇದುವರೆಗೆ GST ರಸೀದಿಗಳನ್ನು ನೀಡಿಯೇ ಇಲ್ಲ !!!**

- **Bowring Institute ಅನ್ನು 03 ವಲಯಗಳನ್ನಾಗಿ ವಿಭಜಿಸಲಾಗಿದ್ದು, 'X' ವಲಯದಲ್ಲಿ ಮಕ್ಕಳ ಆಟದ ಸಲಕರಣೆಗಳನ್ನೊಳಗೊಂಡ ಉದ್ಯಾನವನ ಮಾತ್ರ ಇರಬೇಕಿರುತ್ತದೆ.**

'Y' ವಲಯದಲ್ಲಿ ಮಾತ್ರವೇ Club ಗೆ ಅವಶ್ಯಕತೆ ಇರುವ ಕಟ್ಟಡಗಳನ್ನು ನಿರ್ಮಿಸಬೇಕಿರುತ್ತದೆ.

'Z' ವಲಯವನ್ನು "**No Development Area**" ಎಂದು ಪರಿಗಣಿಸಿದ್ದು, ಈ ವಲಯದಲ್ಲಿ ಯಾವುದೇ ರೀತಿಯ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ.

**1956** ರಲ್ಲಿ ರಾಜ್ಯ ಸರ್ಕಾರ ಮತ್ತು ಬೆಂಗಳೂರು ಸಿಟಿ ಕಾರ್ಪೋರೇಷನ್‌ನ ಆಯುಕ್ತರು **Bowring Institute** ಗೆ ನೀಡಿರುವ ಗುತ್ತಿಗೆ ಪತ್ರ **(Lease Deed)** ದಲ್ಲಿ ಈ ಮೂರು ವಲಯಗಳ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿದೆ.

ಹೀಗಿದ್ದರೂ ಸಹ, ಕಾನೂನಿನ ಎಲ್ಲಾ ನಿಯಮಗಳನ್ನು ಮೀರಿ 'Z' ವಲಯದಲ್ಲಿ ಅಕ್ರಮವಾಗಿ ಬೃಹತ್ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ.

- ₹. 90 ಕೋಟಿ ವೆಚ್ಚದಲ್ಲಿ 'A' Wing ನಲ್ಲಿ 4 ಮಹಡಿ, 'B' Wing ನಲ್ಲಿ 1 ಮಹಡಿ ಮತ್ತು 'C' Wing ನಲ್ಲಿ 4 ಮಹಡಿಗಳ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

  ಇಷ್ಟು ಬೃಹತ್ ಮೊತ್ತದಲ್ಲಿ ಕಟ್ಟಡಗಳನ್ನು ನಿರ್ಮಿಸಲು ನಿಯಮಾನುಸಾರ ಟೆಂಡರ್ ಆಹ್ವಾನಿಸಿ, ನಂತರ ಅರ್ಹ ಗುತ್ತಿಗೆದಾರರಿಗೆ ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ನೀಡಬೇಕಿತ್ತು. ಆದರೆ, ಟೆಂಡರ್ ಆಹ್ವಾನಿಸದೆಯೇ, ನೇರವಾಗಿ ತಮಗೆ ಎಲ್ಲ ರೀತಿಯಲ್ಲೂ ಸಹಕರಿಸುವ (?) ವ್ಯಕ್ತಿಗೆ ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ನೀಡಲಾಗಿದೆ !!!

- ಕಳೆದ **10** ವರ್ಷಗಳಿಂದಲೂ ಪ್ರಗ್ರೂಪ್ ಎಂಬ ವ್ಯಕ್ತಿಯನ್ನು **Bowring Institute** ನ **Architect** ಆಗಿ ಮುಂದುವರೆಸಲಾಗಿದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ "ನಗರ ಯೋಜನೆ ಇಲಾಖೆ"ಯ ಭ್ರಷ್ಟ ಅಧಿಕಾರಿಗಳು "ಕಟ್ಟಡ ನಿರ್ಮಾಣ ಮಾಡಬಾರದ 'Z' ವಲಯದಲ್ಲಿ **Sports Complex** ನಿರ್ಮಿಸಲು **2023-24** ರಲ್ಲಿ ಕಾನೂನು ಬಾಹಿರ ನಕ್ಷೆ ಮಂಜೂರಾತಿ ನೀಡಿದ್ದಾರೆ.

- ಅರವಿಂದ್ ಶರ್ಮ ಎಂಬುವವರ ಮಾಲೀಕತ್ವದ **PGS Logistics** ಎಂಬ ಅತೀ ಸಣ್ಣ ಸಂಸ್ಥೆಯ ಮತ್ತು ಅತೀ ಕಡಿಮೆ ಆದಾಯ ಇರುವಂತಹ ಸಂಸ್ಥೆಯಲ್ಲಿ ನೌಕರನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂಬ ಹಾಸ್ಯಾಸ್ಪದ ಮಾಹಿತಿ ನೀಡಿರುವ **H. S.** ಶ್ರೀಕಾಂತ್ ಅವರಿಗೆ ವರ್ಷವೊಂದಕ್ಕೆ ₹. **30** ಲಕ್ಷ ವೇತನವನ್ನು ನೀಡಲಾಗುತ್ತಿದೆ ಎಂಬ ಮಾಹಿತಿಯನ್ನು ಸಂಸ್ಥೆಯು ನೀಡುತ್ತಿದೆ !!!

  ಆದರೆ, **H. S.** ಶ್ರೀಕಾಂತ್ ಅವರ ಆತ್ಮೀಯನಾಗಿರುವ ಅರವಿಂದ್ ಶರ್ಮ ಅವರ **PGS Logistics** ಕಛೇರಿಯಲ್ಲಿ **H. S.** ಶ್ರೀಕಾಂತ್ ಅವರು ಒಂದೇ ಒಂದು ದಿನವೂ ಸಹ ಕಾರ್ಯ ನಿರ್ವಹಿಸಿರುವುದಕ್ಕೆ ದಾಖಲೆಗಳೇ ಸಿಗುವುದಿಲ್ಲ !!!

- ಇತ್ತೀಚೆಗೆ, **17/02/2026** ರಂದು ದೂರದ "ಬಾಗೇಪಲ್ಲಿ" ತಾಲ್ಲೂಕಿನ ಕಸಬಾ ಹೋಬಳಿಯ "ಪರಗೋಡು ಗ್ರಾಮ"ದ ಸರ್ವೆ ನಂ: **330, 333/1, 332, 333** ಮತ್ತು **334** ರಲ್ಲಿ ಪ್ರತೀ ಎಕರೆಗೆ ₹. **3,69,00,000/-** ಗಳಂತೆ ಒಟ್ಟು **24** ಎಕರೆ ವಿಸ್ತೀರ್ಣದ ಸ್ವತ್ತನ್ನು ಒಟ್ಟು ₹. **88,56,00,000/-** (ಎಂಬತ್ತೆಂಟು ಕೋಟಿ ಐವತ್ತಾರು ಲಕ್ಷ) ಗಳನ್ನು ಪಾವತಿಸಿ "ಶುದ್ಧ ಕ್ರಯ ಪತ್ರ"ವನ್ನು ಕಾರ್ಯದರ್ಶಿ **H. S.** ಶ್ರೀಕಾಂತ್, **Bowring Institute** ಹೆಸರಿಗೆ ಮಾಡಿಸಿಕೊಳ್ಳಲಾಗಿದೆ !!!

ಆದರೆ, ವಾಸ್ತವವಾಗಿ ರಾಜ್ಯದ ಕಂದಾಯ ಇಲಾಖೆಯು ಬಾಗೇಪಲ್ಲಿಯ "ಪರಗೋಡು ಗ್ರಾಮ"ದ ಸರ್ವೆ ನಂ: **330** ರಿಂದ **334** ಕ್ಕೆ ನಿಗದಿ ಪಡಿಸಿರುವ ಮಾರ್ಗಸೂಚಿ ದರ **(Guidance Value)** ಕೇವಲ **₹. 70,00,000/-** ಮಾತ್ರ !!!

- **H. S.** ಶ್ರೀಕಾಂತ್ ಅವರು ಮೊದಲೇ ಹೊಂದಾಣಿಕೆ ಮಾಡಿಕೊಂಡು **M/s Trishul Build tech & Infrastructure Pvt: Ltd.** ಎಂಬ ಸಂಸ್ಥೆಯು "ಪರಗೋಡು ಗ್ರಾಮ"ದ ಸರ್ವೆ ನಂ: **330, 331/1, 332, 333** ಮತ್ತು **334** ರ ಮಾಲೀಕತ್ವ ಹೊಂದಿದ್ದ ರೈತರಿಂದ "ಕರಾರು ಪತ್ರ" **(Agreement)** ವನ್ನು ದಿನಾಂಕ **24/03/2025** ರಂದು ಮಾಡಿಕೊಂಡಿದ್ದು, ಆನಂತರ **M/s Trishul Build tech & Infrastructure Pvt: Ltd.** ಸಂಸ್ಥೆಯಿಂದ **Bowring Institute** ನ ಅಧ್ಯಕ್ಷ ಭಾಸ್ಕರ್ ಮತ್ತು ಕಾರ್ಯದರ್ಶಿ **H. S.** ಶ್ರೀಕಾಂತ್ ಅವರುಗಳ ಹೆಸರುಗಳಿಗೆ "ಕರಾರು ಪತ್ರ" ಮಾಡಿಕೊಳ್ಳಲಾಗಿದೆ.
- ಕೇವಲ, ದೊಡ್ಡ ಪ್ರಮಾಣದ ಹಣ ಲಪಟಾಯಿಸುವ ದುರುದ್ದೇಶದಿಂದ ಪ್ರತೀ ಎಕರೆಯೊಂದಕ್ಕೆ ನಿಗದಿತ ಮಾರ್ಗಸೂಚಿ ದರಕ್ಕಿಂತಲೂ **₹. 2,80,00,000/-** ಗಳಂತೆ ಒಟ್ಟು **₹. 67,20,00,000/-** (ಅರವತ್ತೇಳು ಕೋಟಿ ಇಪ್ಪತ್ತು ಲಕ್ಷ) ಗಳಷ್ಟು ಬೃಹತ್ ಮೊತ್ತವನ್ನು **Bowring Institute** ಗೆ ವಂಚಿಸಿರುವ ಕಾರ್ಯದರ್ಶಿ **H. S.** ಶ್ರೀಕಾಂತ್ ಅವರ ಅಕ್ರಮದಿಂದ ಬೆಚ್ಚಿ ಬಿದ್ದಿರುವ **Bowring Institute** ನ ಅಧ್ಯಕ್ಷರಾದ ಭಾಸ್ಕರ್ ಅವರು ದಿನಾಂಕ **28/05/2025** ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು !!!

  ಬೆಂಗಳೂರು ಮಹಾನಗರದಿಂದ **105** ಕಿ. ಮೀ. ದೂರ ಇರುವಂತಹ ಮತ್ತು ಬರಡು ಭೂಮಿಯಾಗಿರುವ ಬಾಗೇಪಲ್ಲಿಯ ಪರಗೋಡು ಗ್ರಾಮದಲ್ಲಿ **Bowring Institute** ಗೆ ಜಮೀನು ಕ್ರಯಕ್ಕೆ ಪಡೆದಿರುವುದು ಸರಿಯಲ್ಲ ಎಂದು ಪ್ರಶ್ನೆ ಮಾಡುತ್ತಿರುವ ಸದಸ್ಯರುಗಳನ್ನು ಸದಸ್ಯತ್ವದಿಂದ ಅಮಾನತು ಮಾಡಿರುವ ಆದೇಶವನ್ನು **H. S.** ಶ್ರೀಕಾಂತ್ ಅವರು ಹೊರಡಿಸುತ್ತಿದ್ದಾರೆ !!!

## "ತನಿಖೆಗೆ / ತಪಾಸಣೆಗೆ / ಪರಿಶೀಲನೆಗೆ ಬಂದ ಅಧಿಕಾರಿ / ನೌಕರರಿಗೆಲ್ಲಾ ರಿಯಾಯಿತಿ ದರದಲ್ಲಿ ಸದಸ್ಯತ್ವವನ್ನು ನಿಯಮಬಾಹಿರವಾಗಿ ನೀಡಿರುವ ಮಹಾ ವಂಚಕ H. S. ಶ್ರೀಕಾಂತ್"

"ಹುಚ್ಚನ ಮದುವೆಯಲ್ಲಿ ಉಂಡೋನೆ ಜಾಣ" ಎಂಬ ಗಾದೆ ಮಾತನ್ನು ನಿಜವಾಗಿಸುವಂತೆ, **Bowring Institute** ನಲ್ಲಿ ಕಳೆದ **13** ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಬೃಹತ್ ಅಕ್ರಮಗಳ ಬಗ್ಗೆ ತನಿಖೆ / ತಪಾಸಣೆ / ಪರಿಶೀಲನೆ ನಡೆಸಲು ಬಂದಂತಹ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ / ನೌಕರರಿಗೆ ಶೇ. **50%** ರಷ್ಟು ಮತ್ತು ಶೇ. **75%** ರಷ್ಟು ರಿಯಾಯಿತಿ ದರದಲ್ಲಿ ಕಾನೂನು ಬಾಹಿರವಾಗಿ ಸದಸ್ಯತ್ವವನ್ನು **H. S.** ಶ್ರೀಕಾಂತ್ ದಯಪಾಲಿಸಿದ್ದಾನೆ !!!

"**The Karnataka Societies Act, 1960**" ರ ನಿಯಮಗಳಂತೆ ಇಂತಹ **Recreation Club** (ಮನೋರಂಜನಾ ಸಂಸ್ಥೆ) ಗಳಲ್ಲಿ ಸದಸ್ಯತ್ವ ನೀಡಲು ನಿಗದಿತ ಶುಲ್ಕದಲ್ಲಿ ರಿಯಾಯಿತಿ ನೀಡುವಂತಿಲ್ಲ. ಹಾಗಿದ್ದರೂ ಸಹ, **H. S.** ಶ್ರೀಕಾಂತ್ ಅವರು ಸಿಕ್ಕ ಸಿಕ್ಕವರಿಗೆ, ತಮಗಿಷ್ಟ ಬಂದ ರೀತಿಯಲ್ಲಿ ಶೇ. **50%** ರಿಂದ ಶೇ. **75%** ರಷ್ಟು ರಿಯಾಯಿತಿ ನೀಡಿ **Bowring Institute** ನ ಸದಸ್ಯತ್ವವನ್ನು ಕಡಲೆಪುರಿಯಂತೆ ಹಂಚಿದ್ದಾರೆ !!!

Bowring Institute ನ ಬಹಳಷ್ಟು ಮಂದಿ ಪ್ರಾಮಾಣಿಕ ಸದಸ್ಯರು ಹೇಳುವಂತೆ, ತನ್ನ ಅಕ್ರಮಗಳಿಂದ ಮುಂದೆ ಬರಬಹುದಾದ ಕಾನೂನು ಸಂಕಷ್ಟಗಳಿಂದ ಪಾರಾಗಲು, ಸ್ವತಃ H. S. ಶ್ರೀಕಾಂತ್ Club ನ ಹಣವನ್ನೇ ಪಾವತಿಸಿ ಈ ರೀತಿ ರಿಯಾಯಿತಿ ದರದಲ್ಲಿ ಸದಸ್ಯತ್ವ ನೀಡಿರುವಂತಹ ದಾಖಲೆಗಳನ್ನು ಸೃಷ್ಟಿಸಿದ್ದಾನೆ !!!

ಉದಾಹರಣೆಗೆ, Bowring Institute ಸೇರಿದಂತೆ ಬೆಂಗಳೂರು ಮಹಾನಗರದ Club ಗಳಲ್ಲಿ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಹಲವು ಹೋರಾಟಗಾರರು ಮತ್ತು ಸಾರ್ವಜನಿಕರು ನೀಡಿದ್ದ ದೂರುಗಳನ್ನು ಆಧರಿಸಿ, "ಗುತ್ತಿಗೆ ಪತ್ರ" (Lease Deed) ದಲ್ಲಿನ ನಿಯಮ / ಷರತ್ತುಗಳಿಗೆ ವಿರುದ್ಧವಾಗಿ ನಡೆದಿರುವ / ನಡೆಯುತ್ತಿರುವ ಕಾರ್ಯ ಚಟುವಟಿಕೆಗಳು / ನಿರ್ಮಾಣ ಕಾರ್ಯಗಳಿಗೆ ಸಂಬಂಧಿಸಿದಂತೆ "ಸಮಗ್ರ ವರದಿ" ನೀಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತರು ಅಂದಿನ ಪೂರ್ವ ವಲಯದ ಅಧಿಕಾರಿಗಳಿಗೆ 2024 ರಲ್ಲಿ ಆದೇಶಿಸಿದ್ದರು.

ಇದರ ತನಿಖಾ ವರದಿಯನ್ನು ನೀಡಲು Bowring Institute ನ ದಾಖಲೆಗಳ ತಪಾಸಣೆಗೆ ಮತ್ತು ಸ್ಥಳ ಪರಿಶೀಲನೆಗೆಂದು ಮುಂದಾಗಿದ್ದ ಬಿಬಿಎಂಪಿ ಯ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ / ನೌಕರರಿಗೆ ಸದಸ್ಯತ್ವದ ಆಮಿಷ ತೋರಿಸಿ ದೊಡ್ಡ ಮೊತ್ತದ ಹಣದ ಜೊತೆಗೆ ರಿಯಾಯಿತಿ ದರದಲ್ಲಿ Club ನ ಸದಸ್ಯತ್ವವನ್ನು H. S. ಶ್ರೀಕಾಂತ್ ದಯಪಾಲಿಸಿದ್ದಾನೆ.

ಅಂದಿನ ಪಾಲಿಕೆಯ ಪೂರ್ವ ವಲಯದ ಜಂಟಿ ಆಯುಕ್ತರಾಗಿದ್ದ ಹಿರಿಯ K.A.S. ಅಧಿಕಾರಿ K. R. ಪಲ್ಲವಿ (ಮೊ: 9591860887) ಮತ್ತು ಡಾ॥ H. R. ಶಿವಕುಮಾರ್, ಮುಖ್ಯ ಅಭಿಯಂತರರಾಗಿದ್ದ ಮೋಹನ್ ಕೃಷ್ಣ (ಮೊ: 9741897711), ಮತ್ತೊರ್ವ ಮುಖ್ಯ ಅಭಿಯಂತರ ಶ್ರೀಮತಿ. ಸುಗುಣ (ಮೊ: 9480688291) ಅವರ ಪುತ್ರಿ N. S. ಕೀರ್ತಿ, Electrical ವಿಭಾಗದ ಅಧಿಕಾರಿಗಳಾದ R. ಶ್ರೀನಿವಾಸನ್ ಮತ್ತು ಹಂಸವರ್ಧನ್, ಕಂದಾಯ ಪರಿವೀಕ್ಷಕ (Revenue Inspector) ರುಗಳಾದ ರಾಜೇಂದ್ರ (ಮೊ: 9845751606)ಮತ್ತು ವೇದ ಪ್ರಕಾಶ್ ಅಲಿಯಾಸ್ ವೇದಮೂರ್ತಿ (ಮೊ: 9731244775) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಾದ (Junior Health Inspector) ಶ್ರೀಮತಿ. ಕಾತ್ಯಾಯಿನಿ ಅಲಿಯಾಸ್ ಕಾಂತಮಣಿ ಅವರುಗಳಿಗೆ ರಿಯಾಯಿತಿ ದರದಲ್ಲಿ Bowring Institute ನ ಸದಸ್ಯತ್ವವನ್ನು ಕಾನೂನಿನ ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರಿ H. S. ಶ್ರೀಕಾಂತ್ ನೀಡಿದ್ದಾನೆ !!!

ಆದರೆ, ಮೇಲೆ ತಿಳಿಸಿರುವ ಅಧಿಕಾರಿ / ನೌಕರರು ಈ ರೀತಿ ಸಂಸ್ಥೆಯೊಂದರ ಸದಸ್ಯತ್ವವನ್ನು ಪಡೆದುಕೊಳ್ಳುವ ಮುನ್ನ ತಮ್ಮ ಇಲಾಖೆಯ ಮುಖ್ಯಸ್ಥರಾದ ಮಾನ್ಯ ಮುಖ್ಯ ಆಯುಕ್ತರಿಂದ ಅನುಮತಿಯನ್ನು ಪಡೆದುಕೊಳ್ಳಲೇಬೇಕೆಂಬ ನಿಯಮವನ್ನು ಉಲ್ಲಂಘಿಸಿ ಅಕ್ರಮವಾಗಿ Club ನ ಸದಸ್ಯತ್ವ ಪಡೆದಿರುವುದರಿಂದ, ಇವರುಗಳನ್ನು ಸೇವೆಯಿಂದ ಖಾಯಂ ಆಗಿ ವಜಾ ಗೊಳಿಸಬೇಕಿರುತ್ತದೆ.

ಕೇವಲ ಬಿಬಿಎಂಪಿ ಮಾತ್ರವಲ್ಲದೇ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅತ್ಯಂತ ಹಿರಿಯ ಅಧಿಕಾರಿಗಳೂ ಸಹ ನಿಯಮ ಬಾಹಿರವಾಗಿ Bowring Institute ನ ಸದಸ್ಯತ್ವವನ್ನು ರಿಯಾಯಿತಿ ದರದಲ್ಲಿ ಕಳೆದ ಐದಾರು ವರ್ಷಗಳ ಅವಧಿಯಲ್ಲಿ ಪಡೆದುಕೊಂಡಿದ್ದಾರೆ !!!

**"ಪರಮ ವಂಚಕ ಸರ್ವಾಧಿಕಾರಿ"**

Club ನ ಹಣಕಾಸು ಚಟುವಟಿಕೆಗಳ ಬಗ್ಗೆ ಮಾಹಿತಿ ಕೇಳಿದವರನ್ನು ಮತ್ತು ತನ್ನ ವಿರುದ್ಧ ಧ್ವನಿ ಎತ್ತಿದವರನ್ನು ಯಾವುದೇ ಮುನ್ಸೂಚನೆ ಇಲ್ಲದೆಯೇ ಸದಸ್ಯತ್ವದಿಂದ ಅಮಾನತು ಮಾಡುತ್ತಿರುವ H. S. ಶ್ರೀಕಾಂತ್ ಸರ್ವಾಧಿಕಾರಿಯಂತೆ ಮತ್ತು Bowring Institute ತನ್ನ ಸ್ವಂತ ಆಸ್ತಿಯೆಂಬಂತೆ ವರ್ತಿಸುತ್ತಿದ್ದಾನೆ !!!

Bowring Institute ನಲ್ಲಿ H. S. ಶ್ರೀಕಾಂತ್ ನಡೆಸುತ್ತಿರುವ ಅಕ್ರಮಗಳ ಬಗ್ಗೆ ತನಿಖೆ / ವಿಚಾರಣೆ / ತಪಾಸಣೆ / ಪರಿಶೀಲನೆ ನಡೆಸಲು ಬಂದ ಅಧಿಕಾರಿ / ನೌಕರರನ್ನು ತನ್ನ ಅಕ್ರಮ ಹಣದಿಂದ ಕ್ರಯಕ್ಕೆ ಪಡೆದಿರುವ ಮತ್ತು ಕಾನೂನು ಬಾಹಿರ ಸದಸ್ಯತ್ವವನ್ನು ರಿಯಾಯಿತಿ ದರದಲ್ಲಿ ನೀಡಿರುವ ಕಾರಣ ಆತನ ವಿರುದ್ಧ ದಾಖಲಾಗಿರುವ ಹತ್ತಾರು ದೂರುಗಳು ಪ್ರಾಥಮಿಕ ಹಂತಗಳಲ್ಲೇ ಮುಚ್ಚಿ ಹಾಕಲ್ಪಟ್ಟಿವೆ !!!

ಪ್ರಸ್ತುತ ಶೇಷಾದ್ರಿಪುರಂ ಬಡಾವಣೆಯಲ್ಲಿ ಮೂರು ಅಂತಸ್ತುಗಳ ಬೃಹತ್ ಐಷಾರಾಮಿ ಬಂಗಲೆಯನ್ನು ನಿರ್ಮಿಸುತ್ತಿರುವ H. S. ಶ್ರೀಕಾಂತ್ ತನ್ನ ವಿರುದ್ಧ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ತನ್ನ ಪರವಾಗಿ ನ್ಯಾಯಾಲಯಗಳಲ್ಲಿ ವಾದಿಸಲು ದೇಶದ ಪ್ರಖ್ಯಾತ ವಕೀಲರುಗಳನ್ನು ನೇಮಿಸಿಕೊಂಡು, ಅವರುಗಳಿಗೆ Bowring Institute ನ ಖಾತೆಗಳಿಂದಲೇ ಲಕ್ಷ-ಲಕ್ಷ ಹಣವನ್ನು "ಶುಲ್ಕ"ವನ್ನಾಗಿಯೂ ನೀಡುತ್ತಿದ್ದಾನೆ !!!

ಈ ಸಂಬಂಧ ಕೂಡಲೇ ಕ್ರಮಗಳನ್ನು ತೆಗೆದುಕೊಂಡು, ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮಾನ್ಯ ಪ್ರಧಾನ ಮಂತ್ರಿಗಳ ಕಛೇರಿಯಿಂದ ದಿನಾಂಕ 27/04/2026 ರಂದು ಅಧಿಕೃತ ಪತ್ರ ರವಾನೆಯಾಗಿದೆ.

ಆದುದರಿಂದ, ಕಳೆದ 13 ವರ್ಷಗಳಿಂದ "Bowring Institute" ನ ಅಭಿವೃದ್ಧಿ ಕಾರ್ಯಗಳ ಹೆಸರಿನಲ್ಲಿ ನಡೆದಿರುವ ನೂರಾರು ಕೋಟಿ ರೂಪಾಯಿ ಅಕ್ರಮಗಳ ಬಗ್ಗೆ ತನಿಖೆ ನಡೆಸಲು CBI ಅಥವಾ CID ಗೆ ವಹಿಸಬೇಕೆಂದು ಹಾಗೂ ಕೂಡಲೇ "Bowring Institute" ಅನ್ನು Supersede ಮಾಡಿ ಪ್ರಾಮಾಣಿಕ ಹಿರಿಯ IAS ಅಧಿಕಾರಿಯೊಬ್ಬರನ್ನು ಸಂಸ್ಥೆಯ "ಆಡಳಿತಾಧಿಕಾರಿ"ಗಳನ್ನಾಗಿ ನಿಯೋಜಿಸಿ ಆದೇಶಿಸುವ ಸಂಬಂಧ ಕೂಡಲೇ ಕ್ರಮ ವಹಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಿ. ಸೂ:- ಸಂಪೂರ್ಣ ದಾಖಲೆಗಳನ್ನು ಲಗತ್ತಿಸಿದೆ.

ಇಂತಿ,

ರಮೇಶ್ ಎನ್. ಆರ್.

ಮಾಜಿ ಅಧ್ಯಕ್ಷರು
ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕ
ಹಾಗೂ
ಆಡಳಿತ ಪಕ್ಷದ ಮಾಜಿ ನಾಯಕರು, ಬಿಬಿಎಂಪಿ